ದಿನಾಂಕಃ 19-06-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ</u>- ಅರ್ಜಿದಾರರ ಪರವಾಗಿ ಶ್ರೀ. ಪಿ.ಡಿ.ಟಿ. ವಕೀಲರಿಂದಃ-**

ನಾನು ಶಿಕ್ಷಣ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸಿ ನಿವೃತ್ತಿ ಹೊಂದಿರುತ್ತೇನೆ. ನಾನು ಈಗ್ಗೆ 15 ವರ್ಷಗಳ ಹಿಂದೆ ನಿವೃತ್ತಿ ಹೊಂದಿರುತ್ತೇನೆ. ನಾನು ಎಂದೂ ಸಹ ಮಾಗೋಡು ಚುನಾವಣಾ ಮತಗಟ್ಟೆಯಲ್ಲಿ ಮತ ಚಲಾಯಿಸಿರುವುದಿಲ್ಲ. ನಾನು ಕಳೆದ 40 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸವಾಗಿರುತ್ತೇನೆ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳ ಬಗ್ಗೆ ಸಂಪೂರ್ಣ ಮಾಹಿತಿ ಇದೆ . ಈ ಹಿಂದೆ ಸಲ್ಲಿಸಲಾಗಿದ್ದ ಸಿವಿಲ್ ಕೇಸಿನ ನಂಬರ್ ನನಗೆ ಗೊತ್ತಿಲ್ಲ. ಆ ದಾವೆಯನ್ನು ಯಾವ ವರ್ಷ ಮತ್ತು ಯಾವ ಆಸ್ತಿಗಳಿಗೆ ಸಂಬಂಧಪಟ್ಟಂತೆ ಸಲ್ಲಿಸಲಾಗಿತ್ತು ಎಂಬುದು ನನಗೆ ಗೊತ್ತಿಲ್ಲ. ಆ ದಾವೆಯನ್ನು ನಾಗಮಣಿ ಎಂಬುವವರು ಸಲ್ಲಿಸಿದ್ದರು. ಆ ದಾವೆಯನ್ನು ಯಾರ ವಿರುದ್ಧ ಸಲ್ಲಿಸಿದ್ದರು ಎಂಬುದು ನನಗೆ ಗೊತ್ತಿಲ್ಲ. ನಾನು ಸಾದಗೌಡರ ಜನಾಂಗಕ್ಕೆ ಸೇರಿರುತ್ತೇನೆ. ಮಾಗೋಡು ಗ್ರಾಮದಲ್ಲಿ ನನಗೆ ಸೇರಿದ ಮನೆ ಈಗಲೂ ಇದೆ. ಅದೇ ರೀತಿ ಎಂ.ಜಿ.ನಂಜಪ್ಪ ಎಂಬುವವರಿಗೆ ಸೇರಿದ ಮನೆ ಮಾಗೋಡು ಗ್ರಾಮದಲ್ಲಿ ಇರುವುದಿಲ್ಲ. ಎಂ.ಜಿ.ನಂಜಪ್ಪನವರ ಮನೆಯನ್ನು ನಾನು ನೋಡಿರುತ್ತೇನೆ. ಎಂ.ಜಿ.ನಂಜಪ್ಪನವರ ಮನೆ ಬೆಂಗಳೂರಿನ ಹಳೆಗುಡ್ಡದಲ್ಲಿ ಇತ್ತು. ಎಂ.ಜಿ.ನಂಜಪ್ಪನವರ ತಂದೆಯ ಹೆಸರು ಗಂಗಾಧರಪ್ಪ ಎಂಬುದಾಗಿರುತ್ತದೆ.

ಎಂ.ಜಿ.ನಂಜಪ್ಪನವರಿಗೆ ಸಿದ್ದರಾಮಪ್ಪ, ನಂಜಪ್ಪ, ವೆಂಕಟಮ್ಮ, ನರಸಮ್ಮ ಮತ್ತು ಗೌರಮ್ಮ ಎಂಬುವವರು ಮಕ್ಕಳುಗಳಾಗಿರುತ್ತಾರೆ. ಸಿದ್ದರಾಮಪ್ಪನಿಗೆ ಎಷ್ಟು ಜನ ಮಕ್ಕಳುಗಳಿದ್ದರು ಎಂಬುದು ನನಗೆ ಗೊತ್ತಿಲ್ಲ. ನಂಜಪ್ಪನಿಗೆ ಒಬ್ಬಳು ಮಗಳಿದ್ದಾರೆ. ವೆಂಕಟಮ್ಮನಿಗೆ ಇಬ್ಬರು ಮಕ್ಕಳುಗಳಿದ್ದಾರೆ. ನರಸಮ್ಮನಿಗೆ ಎಷ್ಟು ಜನ ಮಕ್ಕಳುಗಳಿದ್ದರು ಎಂಬುದು ನನಗೆ ಗೊತ್ತಿಲ್ಲ. ಗೌರಮ್ಮರವರಿಗೆ ವಿವಾಹವಾಗಿರಲಿಲ್ಲ.

ನಾಗಮಣಿರವರ ತಾಯಿ ಹೆಸರು ಜಯಮ್ಮ ಎಂಬುದಾಗಿರುತ್ತದೆ. ನನ್ನ ಸಾಕ್ಷ್ಯ ಪ್ರಮಾಣ ಪತ್ರದ ಪುಟ 2 ರ 6 ನೇ ಸಾಲಿನಲ್ಲಿ ಬರೆದಿರುವ ಅಂಶಗಳು ಸರಿಯಾಗಿರುವುದಿಲ್ಲ. ನಾಗಮಣಿರವರಿಗೆ ಯಾವ ವರ್ಷ ಮದುವೆ ಆಯಿತು ಎಂಬುದು ನನಗೆ ಗೊತ್ತಿಲ್ಲ. ಆ ಮದುವೆಗೆ ನಾನು ಹೋಗಿರುವುದಿಲ್ಲ. ನನಗೆ ವೆಂಕಟಮ್ಮನವರ ಪರಿಚಯ ಸುಮಾರು 40 ವರ್ಷಗಳಿಂದ ಇರಬಹುದು, ಎಂ.ಜಿ.ನಂಜಪ್ಪನವರ ಪರಿಚಯ ಸುಮಾರು 4 ರಿಂದ 5 ವರ್ಷಗಳಿರಬಹುದು. ಸಾಕ್ಷಿಯು ಅವರ ಮನೆಯಲ್ಲಿ ನಾನು 2 ವರ್ಷಗಳ ಕಾಲ ಇದ್ದೆನು ಎಂದು ಸ್ವತಃ ನುಡಿಯುತ್ತಾರೆ. ಜಯಮ್ಮನವರು ಮಾಗೋಡು ಗ್ರಾಮದಲ್ಲಿ ಜಮೀನನ್ನು ಖರೀದಿಸಿದ್ದರು, ಆದರೆ ಅದರ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ವೆಂಕಟಮ್ಮನವರ ಗಂಡನ ಹೆಸರು ಹೊನ್ನಪ್ಪ ಎಂಬುದಾಗಿರುತ್ತದೆ. ನಾಗಮಣಿರವರನ್ನು ಯಾರಿಗೆ ಕೊಟ್ಟು ಮದುವೆ ಮಾಡಲಾಗಿತ್ತು ಎಂಬುದು ನನಗೆ ಗೊತ್ತಿಲ್ಲ. ನನಗೆ

ನಾಗಮಣಿಯವರ ಪರಿಚಯ ಇರುವುದಿಲ್ಲ. ಈ ಕೇಸಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಸುಳ್ಳು ಪ್ರಮಾಣ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ 1(ಎ) ರಿಂದ 1(ಸಿ), 1(ಡಿ)(1 ರಿಂದ 3) ಮತ್ತು 2 ರಿಂದ 6 ನೇ ಎದುರುದಾರರ ಪರ ವಕೀಲರ ವಿನಂತಿ ಮೇರೆಗೆ ಮುಂದುವರಿದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ